# ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 235 |
| 02. | ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ. ಮಧು ಜಿ. ಮಾದೇಗೌಡ. (ಪದವೀಧರರ ಕ್ಷೇತ್ರ) |
| 03. | ಉತ್ತರಿಸುವ ದಿನಾಂಕ | : | 06-07-2023 |
| 04. | ಉತ್ತರಿಸುವ ಸಚಿವರು. | : | ಗೃಹ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯದ ಪಂಚಾಯತ್‌ರಾಜ್ ಎಂಜಿನಿಯರಿಂಗ್ (ಪಿಆರ್‌ಇಡಿ) ವಿಭಾಗದಲ್ಲಿ ನಡೆದಿದೆ ಎನ್ನಲಾದ ಹಣ ದುರುಪಯೋಗ ಪ್ರಕರಣದ ತನಿಖೆಯನ್ನು ಸಿಐಡಿಗೆ ಯಾವಾಗ ವಹಿಸಲಾಯಿತು; (ಸಂಪೂರ್ಣ ವಿವರ ಮತ್ತು ಆದೇಶದ ಪ್ರತಿ ನೀಡುವುದು). | ಮಂಡ್ಯದ ಪಂಚಾಯತ್‌ರಾಜ್ ಎಂಜಿನಿಯರಿಂಗ್ (ಪಿಆರ್‌ಇಡಿ) ವಿಭಾಗದಲ್ಲಿ ನಡೆದಿದೆ ಎನ್ನಲಾದ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ದಾಖಲಾದ ಮಂಡ್ಯ ಪಶ್ಚಿಮ ಪೋಲೀಸ್ ಠಾಣೆ ಮೊ.ಸಂ. 171/2019 ಕಲಂ: 408, 409, 465, 468, 417, 420 ಐಪಿಸಿ ಪ್ರಕರಣವನ್ನು ಸರ್ಕಾರದ ಆದೇಶ ಸಂಖ್ಯೆ: ಒಇ ೬೫ ಸಿಓಡಿ 2020, ದಿನಾಂಕ: 23-12-2020 ರಂದು ಡಿಜಿಪಿ, ಸಿಐಡಿ, ಬೆಂಗಳೂರು ರವರಿಗೆ ಮುಂದಿನ ತನಿಖೆಗಾಗಿ ವಹಿಸಲಾಗಿರುತ್ತದೆ. (ಆದೇಶದ ಪ್ರತಿಯನ್ನು ಲಗತ್ತಿಸಿದೆ). |
| ಆ) | ಸದರಿ ಪ್ರಕರಣದ ಪ್ರಸ್ತುತ ತನಿಖಾಧಿಕಾರಿ ಯಾರು, ಈವರೆವಿಗೂ ಎಷ್ಟು ಮಂದಿ ತನಿಖಾಧಿಕಾರಿಗಳು ಬದಲಾಗಿದ್ದಾರೆ; (ಸಂಪೂರ್ಣ ವಿವರ ಹೆಸರು, ಪದನಾಮ ಮತ್ತು ತನಿಖೆ ನಡೆಸಿದ ಕಾಲಾವಧಿ ನೀಡುವುದು) | ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ) | ತನಿಖೆಗೆ ಪೂರಕವಾಗಿ ಪಂಚಾಯತ್‌ರಾಜ್ ಎಂಜಿನಿಯರಿಂಗ್ (ಪಿಆರ್‌ಇಡಿ) ವಿಭಾಗ ದಿಂದ ಎಷ್ಟು ಕಡತಗಳನ್ನು/ ದಾಖಲೆ ಗಳನ್ನು ಸಿಐಡಿ ತನ್ನ ವಶಕ್ಕೆ ಪಡೆದು ಕೊಂಡಿರುತ್ತದೆ; (ವಿವರ ನೀಡುವುದು) | ತನಿಖೆಗೆ ಪೂರಕವಾಗಿ 285 ದಾಖಲೆಗಳನ್ನು ಪಡೆದು ಕೊಳ್ಳಲಾಗಿದೆ. ವಿವರ ಈ ಕೆಳಕಂಡಂತಿದೆ.<br>1) 102 ಚೆಕ್‌ಗಳು<br>2) ಚಲನ್-1<br>3) 165 ಓಚೆರ್ಸ್+ ಪತ್ರಗಳು.<br>4) 17 ರಿಜಿಸ್ಟರ್‌ಗಳು |
| ಈ) | ತನಿಖೆಗೆ ಪೂರಕವಾಗಿ ಇದುವರೆವಿಗೂ ಎಷ್ಟು ಮಂದಿ ಆರೋಪಿತ ಸಿಬ್ಬಂದಿ/ಅಧಿಕಾರಿಗಳನ್ನು ತನಿಖೆಗೆ ಒಳಪಡಿಸಲಾಗಿದೆ; | ಪ್ರಕರಣದ ಎಫ್.ಐ.ಆರ್ ನಲ್ಲಿನ ಆರೋಪಿ-1 ರವರನ್ನು ಹಾಗೂ ಸಂಬಂಧಪಟ್ಟ ಇತರೆ ಸಿಬ್ಬಂದಿ/ಅಧಿಕಾರಿಗಳನ್ನು ತನಿಖೆ ಮಾಡಲಾಗಿರುತ್ತದೆ. |

..2

| | | |
|---|---|---|
| ಉ) | ಸದರಿ ಪ್ರಕರಣದ ತನಿಖೆ ಯಾವ ಹಂತದಲ್ಲಿದೆ ಹಾಗೂ ಪ್ರಗತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೆ; | ಪ್ರಕರಣವು ತನಿಖಾ ಹಂತದಲ್ಲಿದೆ.<br><br>ಪ್ರಕರಣದಲ್ಲಿ ಆಡಿಟ್ ವರದಿ ಹಾಗೂ ಎಫ್.ಎಸ್.ಎಲ್ ವರದಿಯು ಬಾಕಿಯಿರುತ್ತದೆ. |
| ಊ) | ಸದರಿ ಪ್ರಕರಣದ ತನಿಖೆ ವಿಳಂಬ ವಾಗಿರುವುದಕ್ಕೆ ಕಾರಣಗಳೇನು; ತನಿಖೆಯನ್ನು ಯಾವ ಕಾಲಮಿತಿಯೊಳಗೆ ಪೂರ್ಣ ಗೊಳಿಸಲಾಗುವುದು? (ಸಂಪೂರ್ಣ ವಿವರ ನೀಡುವುದು) | 1. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ರವರಿಗೆ 2010ರಿಂದ 2020ರ ವರೆಗೆ ವರ್ಷಾವಾರು ಆಡಿಟ್ ವರದಿಯನ್ನು ಮತ್ತು ಕರ್ತವ್ಯ ಹಂಚಿಕೆ ಮಾಡಿರುವ ವಿವರವನ್ನು ತ್ವರಿತವಾಗಿ ನೀಡುವಂತೆ 05 ಬಾರಿ ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್, ಮಂಡ್ಯ ರವರಿಗೆ 01 ಬಾರಿ ಒಟ್ಟು 06 ಬಾರಿ ಪತ್ರ ವ್ಯವಹಾರ ಮಾಡಲಾಗಿರುತ್ತದೆ. ವರದಿ ಬರುವುದು ಬಾಕಿಯಿರುತ್ತದೆ.<br><br>2. RFSL ಮೈಸೂರು ರವರಿಂದ ಕೈ ಬರಹ ತಜ್ಞರ ವರದಿ ಬಾಕಿ ಇರುತ್ತದೆ. |

HD 08 SDN 2023

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು

(1)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಂಡ್ಯ ಜಿಲ್ಲೆಯ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಐ.ಡಿ. ವಿಭಾಗದ ಕಛೇರಿಯಲ್ಲಿ ರೂ. 2,60,46,689/-ರೂಪಾಯಿಗಳ ಹಣ ದುರುಪಯೋಗದ ಪ್ರಕರಣವನ್ನು ಸಿಐಡಿ ತನಿಖೆ ನಡೆಸುವ ಬಗ್ಗೆ.

ಓದಲಾಗಿದೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ರಾಜ್ ಇಲಾಖೆಯ ಕಡತ ಸಂಖ್ಯೆ: e-office RDPR 40 AFN 2020(286162).

In No: 28 DEC 2020 ಬೆಂಗಳೂರು

A.I.G.P. (Crime) 29/12/20

**ಪ್ರಸ್ತಾವನೆ:**

ಮೇಲೆ ಓದಲಾದ ಇ-ಕಡತದಲ್ಲಿ ಶ್ರೀ ಹೆಚ್.ಎಲ್. ನಾಗರಾಜು 'ಡಿ' ದರ್ಜೆ ನೌಕರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕೆ.ಆರ್. ಪೇಟೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಕಾರ್ಪೋರೇಷನ್ ಬ್ಯಾಂಕ್ ಆಫ್ ಇಂಡಿಯಾ ಈ ಎರಡೂ ಬ್ಯಾಂಕ್ ಗಳ ಜಂಟಿ ಖಾತೆಯಿಂದ ತಮ್ಮ ಸ್ವಂತ ಖಾತೆಗೆ ಹಣ ವರ್ಗಾವಣೆ ಮಾಡಿಕೊಂಡು ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ: 0171/2019, IPC 1880 (U/S 408,409,465,468,417,420) ರನ್ವಯ ಪ್ರಕರಣ ದಾಖಲಾಗಿರುತ್ತದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಅಧಿಕಾರಿ, ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ವಿಶೇಷ ಲೆಕ್ಕ ಪರಿಶೋಧನಾ ವರದಿಯನ್ವಯ

DG & IGP

**ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ಕಛೇರಿಯ ಬ್ಯಾಂಕ್ ಆಫ್ ಇಂಡಿಯಾ ಮಂಡ್ಯ ಶಾಖೆಗೆ ಬದಲಾಗಿ ಶ್ರೀ ಎಚ್.ಎಲ್. ನಾಗರಾಜು, ರವರ ಬ್ಯಾಂಬ್ ಆಫ್ ಇಂಡಿಯಾ ಮಂಡ್ಯ ಶಾಖೆಯಲ್ಲಿನ ಅವರ ವೈಯಕ್ತಿಕ ಖಾತೆಗೆ ಜಮ ಮಾಡಿಕೊಂಡಿರುವ ಧನಾದೇಶಗಳ ಬಾಬ್ತು ರೂ.47,74,965/-**

**ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ಕಛೇರಿಯ ಬ್ಯಾಂಕ್ ಆಫ್ ಇಂಡಿಯಾ ಮಂಡ್ಯ ಶಾಖೆಗೆ ಬದಲಾಗಿ ಶ್ರೀ ಹೆಚ್.ಎಲ್. ನಾಗರಾಜು ರವರ ಬ್ಯಾಂಕ್ ಆಫ್ ಇಂಡಿಯಾ ಮಂಡ್ಯ ಶಾಖೆಯಲ್ಲಿನ ಅವರ ವೈಯಕ್ತಿಕ ಖಾತೆಗೆ ಜಮ ಮಾಡಿಕೊಂಡಿರುವ ವಿವಿಧ ಬ್ಯಾಂಕ್ ಗಳ ಧನಾಧೇಶಗಳ ಮೊತ್ತ ಬಾಬ್ತು ರೂ.57,50,340/-**

ADGP (Cr & TS)
AIGP (CRM)
CRM. Sec

**ಹೆಚ್.ಎಲ್. ನಾಗರಾಜು ರವರ ಬ್ಯಾಂಕ್ ಆಫ್ ಇಂಡಿಯಾ ಮಂಡ್ಯ ಶಾಖೆಯಲ್ಲಿನ ಖಾತೆಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಧನಾದೇಶ ನೀಡಿಲ್ಲದಿದ್ದರೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ಕಛೇರಿ ಧನಾದೇಶಗಳ ಮುಖಾಂತರ ನೇರವಾಗಿ ಜಮೆ ಆದ ಮೊತ್ತದ ಬಾಬ್ತು ರೂ. 1,55,21,384/-**

ಒಟ್ಟು ಬಾಬ್ತು ರೂ. 2,60,46,689/-ಗಳ ಹಣ ದುರುಪಯೋಗವಾಗಿರುವುದಾಗಿ ತಿಳಿಸಿ ಈ ಹಗರಣದಲ್ಲಿ ಬ್ಯಾಂಕ್ ಅಧಿಕಾರಿ ಸಿಬ್ಬಂದಿಗಳು ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಸದರಿ ಹಣ ದುರುಪಯೋಗ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲು ಕೋರಿರುತ್ತಾರೆ.

Crm 10

..2

ಈ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಐ.ಡಿ. ವಿಭಾಗದ ಕಛೇರಿಯಲ್ಲಿ ಆಗಿರುವ ಹಣ ದುರುಪಯೋಗ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲು ಸರ್ಕಾರವು ಉದ್ದೇಶಿಸಿದೆ. ಅದರಂತೆ ಈ ಕೆಳಗಿನ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಒಇ 65 ಸಿಐಡಿ 2020, ಬೆಂಗಳೂರು, ದಿನಾಂಕ:23.12.2020.</u>**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಐ.ಡಿ. ವಿಭಾಗದ ಕಛೇರಿಯಲ್ಲಿ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 0171/2019 ಕಲಂ 408,409,465,468,417,420 ಐಪಿಸಿ ರಡಿ ದಾಖಲಾಗಿರುವ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿ ಆದೇಶಿಸಿದೆ.

ಸಿಐಡಿ ತಂಡವು ಈ ಪ್ರಕರಣದ ತನಿಖೆಯನ್ನು ಶೀಘ್ರವಾಗಿ ಪೂರ್ಣಗೊಳಿಸಿ ವರದಿಯನ್ನು ನ್ಯಾಯಾಲಯಕ್ಕೆ ತ್ವರಿತವಾಗಿ ಸಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮತ್ತು ಕೈಗೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸುವಂತೆಯೂ ಸಹ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
23/12/2020
(ಲತಾ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ(ಅಪರಾಧಗಳು)

**ಇವರಿಗೆ:**

1. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು.
2. ಪೊಲೀಸ್ ಮಹಾ ನಿರ್ದೇಶಕರು, ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು,ಬೆಂಗಳೂರು.
3. ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಮಂಡ್ಯ.
4. ಹೆಚ್ಚುವರಿ ಪ್ರತಿ/ ಶಾಖಾ ರಕ್ಷಾ ಕಡತ

**ಪ್ರತಿ:**

1. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಯವರಿಗೆ, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ, ವಿಧಾನ ಸೌಧ, ಬೆಂಗಳೂರು
3. ಮಾನ್ಯ ಸಹಕಾರ ಇಲಾಖೆ ಸಚಿವರು, ಇವರ ಆಪ್ತ ಶಾಖೆ, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಶಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ(ಪಿಸಿಎಎಸ್), ಒಳಾಡಳಿತ ಇಲಾಖೆ, ಇವರ ಆಪ್ತ ಶಾಖೆ, ವಿಧಾನ ಸೌಧ,ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿ (ಅಪರಾಧ), ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ (ಸಮನ್ವಯ), ಒಳಾಡಳಿತ ಇಲಾಖೆ.

## ಅನುಬಂಧ

| ಕ್ರ ಸಂ | ತನಿಖಾಧಿಕಾರಿಗಳ ಹೆಸರು | ಪದನಾಮ | ಕಾಲಾವಧಿ |
|---|---|---|---|
| 1 | ಶ್ರೀ. ವೆಂಕಟೇಶ ಬಿ.ಎಸ್. | ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ | ದಿ:02-11-2019 ರಿಂದ ದಿ:10-09-2020 |
| 2 | ಶ್ರೀ. ಹರೀಶ್‌ಬಾಬು. ಕೆ | ಪೊಲೀಸ್ ಇನ್ಸ್‌ಪೆಕ್ಟರ್, ಮಂಡ್ಯ ಸಿ.ಇ.ಎನ್, ಪೊಲೀಸ್ ಠಾಣೆ. | ದಿ:10-09-2020 ರಿಂದ ದಿ:20-01-2021 |
| 3 | ಶ್ರೀ. ಪುನೀತ್ ಟಿ.ಎಂ | ಪೊಲೀಸ್ ಇನ್ಸ್‌ಪೆಕ್ಟರ್, ಸಿಐಡಿ, ಸಿಐಯು, ಮೈಸೂರು | ದಿ:20-01-2021 ರಿಂದ ದಿ:01-04-2021 |
| 4 | ಶ್ರೀ. ಮುರಳಿಧರ ಎಂ.ಕೆ | ಪೊಲೀಸ್ ಇನ್ಸ್‌ಪೆಕ್ಟರ್, ಸಿಐಡಿ, ಸಿಐಯು, ಮೈಸೂರು | ದಿ:01-04-2021 ರಿಂದ ದಿ:06-08-2022 |
| 5 | ಶ್ರೀ. ನಂಜಪ್ಪ ಎಂ | ಪೊಲೀಸ್ ಇನ್ಸ್‌ಪೆಕ್ಟರ್, ಸಿಐಡಿ, ಸಿಐಯು, ಮೈಸೂರು | ದಿ:25-10-2022 ರಿಂದ ಇಲ್ಲಿಯವರೆಗೆ |